ಎಂದು ಪ್ರಾರ್ಥಿಸಬೇಕೆಂದು ನಿವೇದಿತಾ ಶ್ರೀಮಾತೆ ಶಾರದಾ ದೇವಿಯವರಿಗೆ ಪತ್ರ ಬರೆಯುತ್ತಾರೆ. ನಿವೇದಿತಾರ ಜೊತೆ ಯಲ್ಲಿರುವಾಗ ಸಾರಾರ ಮನಸ್ಸು ಸ್ವಾಮಿ ವಿವೇಕಾನಂದರ ಹಾಗೂ ವೇದಾಂತದ ಭಾವನೆಗಳಿಂದ ತುಂಬಿರುತ್ತಿತ್ತು. ಈಗ ಆಕೆಯ ಹೃದಯ ಬಹುಮಟ್ಟಿಗೆ ವಿಕಾಸಗೊಂಡಿತ್ತು. ಅವರ ಮಗಳ ಬಗೆಗಿನ ಕಹಿ ಭಾವನೆಗಳೆಲ್ಲ ಸ್ವಾಮಿ ವಿವೇಕಾನಂದರ ಕೃಪೆಯಿಂದ ಮಾಯ ವಾಗಿದ್ದವು. ಸಾರಾ ಆಧ್ಯಾತ್ಮಿಕ ತಾಯ್ತನದ ಪೂರ್ಣ ಅವಸ್ಥೆ ಯನ್ನು ಮುಟ್ಟಿದ್ದರು. ೧೯೧೧ ಜನವರಿ ೧೭ರಂದು ಅವರು ಶಾಂತ ವಾಗಿಯೇ ಇದ್ದರು. ಮಲಗುವ ಮುನ್ನ ನಿವೇದಿತಾಗೆ ಸ್ವಾಮೀಜಿ ಯವರ ಪ್ರತಿಮೆಯನ್ನು ತಮ್ಮ ಡೆಸ್ಕ್ ಮೇಲಿಡಲು ಹೇಳಿದರು. ಆದರೆ ಅದು ಬುದ್ಧನ ಪ್ರತಿಮೆಯಾಗಿತ್ತು. ಸಾರಾ ಬುದ್ಧನನ್ನು ಸ್ವಾಮೀಜಿಯವರಲ್ಲಿ ಕಂಡರು. ಮರುದಿನ ಬೆಳಗ್ಗೆ ಅತ್ಯಂತ ಶಾಂತಿಯಿಂದ ಸಾರಾ ತಮ್ಮ ದೇಹವನ್ನು ತೊರೆದು ಶಾಂತಿ ಧಾಮವನ್ನು ಹೊಂದಿದರು. ಸಾರಾರಿಗೆ ಇನ್ನೂ ಸ್ವಲ್ಪ ಪ್ರಜ್ಞೆ ಇರು ವಾಗಲೇ ನಿವೇದಿತೆ ಅವರ ಕಿವಿಯಲ್ಲಿ "ಹರಿ ಓಂ ರಾಮಕೃಷ್ಣ" ಪಠಿಸಿದರು.

ಮಹಾಮಾಯೆಯ ವಿಚಿತ್ರ ಸೃಷ್ಟಿರಚನೆಯಲ್ಲಿ ತ್ಯಾಗಿಗಳೂ, ಅಪೂರ್ವದಾನಿಗಳೂ, ಪವಿತ್ರರೂ ಹುಟ್ಟುವಂತೆ, ಸ್ವಾರ್ಥಿಗಳೂ, ಕ್ರೂರಿಗಳೂ ಹುಟ್ಟುತ್ತಾರೆ. ಶ್ರೀಮಾತೆ ಶಾರದಾದೇವಿಯವರನ್ನು ಕೊಟ್ಟಂತಹ ಮನೆ ಇತರ ಅವರ ಬಂಧುಗಳನ್ನೂ ಕೊಟ್ಟಿತು. ಆಕೆಯ ಇತರ ಬಂಧುಗಳು ಇದ್ದ ರೀತಿ! ರಾಧು ಶ್ರೀಮಾತೆ ಯವರನ್ನು ಕಾಡಿದಂತೆ ಓಲಿಯಾಳೂ ಸಾರಾರನ್ನು ಕಾಡಿದಳು, ಹಿಂಸಿಸಿದಳು. ಇದು ವಿಧಿನಿಯಮದಂತೆ. ರಾಧುವಿನ ಪಾತ್ರ ಶ್ರೀಮಾತೆಯವರ ಜೀವನದಲ್ಲಿತ್ತು. ಓಲಿಯಾಳ ಪಾತ್ರ ಸಾರಾರ ಜೀವನದಲ್ಲಿತ್ತು. ಓಲಿಯಾ ಹಾಗೂ ಆಕೆಯ ಮಗಳು ಎಡ್ವಿನಾ ಸಾರಾರ ಆಧ್ಯಾತ್ಮಿಕ ತರಬೇತಿಗೆ ನಿಮಿತ್ತರಾಗಿದ್ದರು. ಇವರ ಸಂಬಂಧದಿಂದ ಸಾರಾ ತಿತಿಕ್ಷೆ ಹಾಗೂ ಕ್ಷಮೆಯನ್ನು ಬೆಳೆಸಿ ಕೊಂಡರು. ಸಾರಾರ ವೈಯಕ್ತಿಕ ಜೀವನ ದುಃಖ ಮತ್ತು ಸೋಲಿನ ದಾಗಿದ್ದರೂ, ಆಕೆಯ ಆಧ್ಯಾತ್ಮಿಕ ಜಯ ಬಹುಮೇಲ್ಮಟ್ಟದ್ದು. ಆಕೆ ತನ್ನ ತಾಯ್ತನದ ಪ್ರೀತಿಯಲ್ಲಿ ಎಷ್ಟು ಹಿರಿಯರಾದರೆಂದರೆ ಆಕೆ ದುರ್ಜನ-ಸಜ್ಜನರ ತಾಯಿಯಾದರು. ಸಾರಾ ಸ್ವಾಮಿ ವಿವೇಕಾನಂದರ ಆದರ್ಶ ಮಹಿಳೆ. ಸಾರಾ ಕೃಪಾಮಯಿಯೂ, ಪ್ರೇಮಮೂರ್ತಿಯೂ, ಕ್ಷಮಾಶೀಲರೂ, ಬುದ್ಧಿ ಹಾಗೂ ಹೃದಯ ದಲ್ಲಿ ಹಿರಿಯರೂ ಹಾಗೂ ಆಧ್ಯಾತ್ಮಿಕತೆಯಲ್ಲಿ ಅತ್ಯಂತ ಉನ್ನತ ಸ್ತರಗಳನ್ನು ಏರಿದವರೂ ಆಗಿದ್ದರು.

◆

## ಪುಸ್ತಕ ಪರಿಚಯ

**ಅದ್ಭುತ ಚರಿತೆ ಶಾರದಾಮಾತೆ**

ಲೇಖಕರು : ಸ್ವಾಮಿ ಹರ್ಷಾನಂದ

ಪ್ರಕಾಶಕರು : ರಾಮಕೃಷ್ಣ ಮಠ, ಬಸವನಗುಡಿ ರಸ್ತೆ, ಬೆಂಗಳೂರು-560 019 ಬೆಲೆ : ರೂ. 5/-

ಶ್ರೀಮಾತೆ ಶಾರದಾದೇವಿಯವರ ಜೀವನ ಮತ್ತು ವ್ಯಕ್ತಿತ್ವವು ಪವಿತ್ರವೂ ಹೌದು, ಅದ್ಭುತವೂ ಹೌದು. ವನಸುಮದಂತೆ ಬಾಳಿ ಬೆಳಗಿದ ಶ್ರೀಮಾತೆಯವರ ಜೀವನದ ಪರಿಶುದ್ಧ ಸುಗಂಧ ದೇಶವಿದೇಶಗಳಲ್ಲಿ, ಲಕ್ಷಾಂತರ ಜನರ ಹೃನ್ಮನಗಳ ಕೊಳೆ ಯನ್ನು ತೊಳೆದು ಬೆಳಗಿದೆ, ಬೆಳಗುತ್ತಲಿದೆ, ಬೆಳಗಲಿದೆ. ಈ ವರ್ಷ ಒಂದು ಸೌಭಾಗ್ಯದ ವರ್ಷ, ಶ್ರೀಮಾತೆಯವರ ೧೫೦ನೆ ಜನ್ಮಜಯಂತಿಯ ಮಹೋತ್ಸವದ ವರ್ಷ. ಶ್ರೀಶಾರದಾದೇವಿ ಯವರ ಅಮೃತೋಪಮ ಜೀವನ ಮತ್ತು ಸಂದೇಶಗಳನ್ನು ಹೆಚ್ಚು ಹೆಚ್ಚು ಜನಕ್ಕೆ ತಲುಪಿಸುವ ಮಹೋನ್ನತ ಕಾರ್ಯಗಳು ಈಗ ನಡೆಯುತ್ತಲಿವೆ. ಅಂತಹ ಪ್ರಯತ್ನಗಳಲ್ಲಿ ವಿಶಿಷ್ಟವಾಗಿ ಎದ್ದು ನಿಲ್ಲು ವುದೆಂದರೆ, ಚಿಕ್ಕದಾದರೂ, ಮಹತ್ತಿನಲ್ಲಿ, ಗುಣದಲ್ಲಿ ಮತ್ತು ವಿಷಯಗಾಂಭೀರ್ಯದಲ್ಲಿ ಹಿರಿದಾದ ಈ ಮೇಲಿನ ಪುಸ್ತಕ.

ಸ್ವಾಮಿ ಹರ್ಷಾನಂದಜಿಯವರು ಅಂಗೈ ಕನ್ನಡಿಯಲ್ಲಿ ಆಕಾಶ ವನ್ನೇ ಹಿಡಿದು ತೋರಿಸುವಂತೆ, ಶ್ರೀಮಾತೆಯವರ ಜೀವನದ ಹಲವು ಅದ್ಭುತ ಮುಖಗಳನ್ನು ಸರಳವಾದ, ಅದೇ ಸಮಯದಲ್ಲಿ ನಿರ್ದುಷ್ಟವಾದ ಭಾಷೆಯಲ್ಲಿ, ಮನರಂಜಿಸುವ ಶೈಲಿಯಲ್ಲಿ ನಮ್ಮ ಮುಂದಿಟ್ಟಿದ್ದಾರೆ. ೧೯ ಶೀರ್ಷಿಕೆಗಳ ಅಡಿಯಲ್ಲಿ ಇರುವ ಚಿಕ್ಕ ಚಿಕ್ಕ ಅಧ್ಯಾಯಗಳಲ್ಲಿ ಮಹಾ ಆದರ್ಶಮೂರ್ತಿಯಾದ ಶ್ರೀಶಾರದಾದೇವಿಯವರ ಜೀವನ ಮತ್ತು ಉಪದೇಶಗಳು ಸಾಮಾಜಿಕ, ತಾತ್ತ್ವಿಕ, ಆಧ್ಯಾತ್ಮಿಕ ಮತ್ತು ಮಾನವತೆಯ ನೆಲೆ ಗಳಲ್ಲಿ ಹೃದಯಂಗಮವಾಗಿ ಚಿತ್ರಿತವಾಗಿವೆ.

ಶ್ರೀಮಾತೆಯವರ ಪಾದಗಳಲ್ಲಿ ಸಮರ್ಪಿಸಿದ ಬೌದ್ಧಿಕ ಕೊಡುಗೆಯಾದ ಇದರ ಶ್ರೇಯಸ್ಸು ಹೆಚ್ಚಿರುವುದು, ಬೆಲೆಬಾಳುವ ಹಾಲುಕಾಗದದಲ್ಲಿ ಮುದ್ರಿತವಾದ ಶ್ರೀಮಾತೆಯವರ ವರ್ಣ ರಂಜಿತ ಚಿತ್ರಗಳಿಂದ. ಒಳ್ಳೆಯ ದರ್ಜೆಯ ಬಿಳುಪು ಕಾಗದದ ಮೇಲೆ ಅಂದವಾಗಿ ಮುದ್ರಿತಗೊಂಡು, ದಪ್ಪನೆಯ ಆರ್ಟ್ ಕಾರ್ಡಿನ ಮೇಲೆ ಇರುವ ಮನೋಹರ ವರ್ಣರಂಜಿತ ವಿನ್ಯಾಸದ ರಕ್ಷಾಕವಚವುಳ್ಳ ಈ ಪುಸ್ತಕದ ಬೆಲೆ ಕೇವಲ ಐದು ರೂಪಾಯಿ ಗಳೆಂದರೆ ಎಂತಹವನೂ ನಂಬದೇ ಹೋದಾನು.

ಶ್ರೀಮಾತೆಯವರ ಸ್ಮರಣೆಯನ್ನು ಸ್ತೋತ್ರಪಠಣಗಳ ಮೂಲಕ ಮಾಡಲಿಚ್ಛಿಸುವ ಭಕ್ತರ ಅನುಕೂಲಕ್ಕಾಗಿ ಶ್ರೀಶಾರದಾದೇವಿ ಅಷ್ಟೋತ್ತರ ಶತನಾಮ ಸ್ತೋತ್ರ ಮತ್ತು ನಾಮಾವಲಿಗಳೂ ಈ ಪುಸ್ತಕದಲ್ಲಿ ಅಡಕವಾಗಿವೆ.

ಸ್ವಾಮಿ ಹರ್ಷಾನಂದಜಿಯವರ ವಿದ್ವತ್‌ಭರಿತ ಮೂಲ ಆಂಗ್ಲ ಗ್ರಂಥದ ಸುಲಲಿತ ಕನ್ನಡ ಅನುವಾದ ಶ್ರೀ ಎಚ್.ವಿ. ವಿಶ್ವನಾಥ ಅವರದು. ಪವಿತ್ರ ಚರಿತೆಯಾದ ಆ ಮಹಾತಾಯಿಯ ವೃತ್ತಾಂತ ವನ್ನು ಇಷ್ಟೊಂದು ಸುಂದರವಾಗಿ, ಎಲ್ಲರಿಗೂ ಕೈಗೆಟುಕುವ ಬೆಲೆ ಇಟ್ಟು ಪ್ರಕಟಿಸಿರುವ ಸ್ವಾಮೀಜಿಯವರು ಸ್ತುತ್ಯರ್ಹರು. ಇದರ ಸದುಪಯೋಗವನ್ನು ಪಡೆದುಕೊಳ್ಳುವ ಜವಾಬ್ದಾರಿ ಮಾತ್ರ ನಮ್ಮನಿಮ್ಮೆಲ್ಲರದು.

–ಸ್ವಾಮಿ ಪರೇಶಾನಂದ